ಮಂಕಿಯಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ಶಾಖಾ ಕಛೇರಿಯನ್ನು ತೆರೆಯುವ ಬಗ್ಗೆ

318 (102) ಶ್ರೀ ಶಿವಾನಂದ ನಾಯಕ್ (ಭಟ್ಕಳ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹೊನ್ನಾವರ ತಾಲ್ಲೂಕಿನ ಮಂಕಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಶಾಖಾ ಕಛೇರಿಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸದರಿ ಶಾಖಾ ಕಛೇರಿಯನ್ನು ತೆರೆಯಲು ಸರ್ಕಾರವು ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಮಂಡಳಿಯ ಆರ್ಥಿಕ ಬಿಕ್ಕಟ್ಟಿನ ಕಾರಣ ಪ್ರಸ್ತುತ ನೇಮಕಾತಿಯನ್ನು ತಡೆಹಿಡಿದಿರುವುದರಿಂದ ಹಾಗೂ ಎರಡನೇಯ ವರ್ಕ್‌ಲೋಡ್ ಕಮಿಟಿಯ ವರದಿಯನ್ನು ಅನುಷ್ಠಾನಕ್ಕೆ ತಂದ ನಂತರ ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಕೆ.ಪಿ.ಸಿ.ಯಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸರಬರಾಜು ಆಗುತ್ತಿರುವ ವಿದ್ಯುತ್ ಪ್ರಮಾಣ

320 (492) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆ.ಪಿ.ಸಿ.ಯಿಂದ ಕೆ.ಇ.ಬಿ.ಗೆ ಸರಬರಾಜು ಆಗುತ್ತಿರುವ ವಿದ್ಯುತ್ತಿನ ಪ್ರಮಾಣ ಎಷ್ಟು ;

ಆ) ಕೆ.ಪಿ.ಸಿ.ಯಿಂದ ಕೆ.ಇ.ಬಿ.ಗೆ ವಿದ್ಯುತ್ ಸರಬರಾಜು ಆಗುವಾಗ ಮತ್ತು ಕೆ.ಇ.ಬಿ. ಹಂಚಿಕೆ ಸಮಯದಲ್ಲಿ ಸೋರಿಕೆಯಾಗುತ್ತಿರುವ ಪ್ರಮಾಣ ಎಷ್ಟು?

ಇ) ಈ ಸೋರಿಕೆಯನ್ನು ತಡೆಗಟ್ಟಲು ಸರ್ಕಾರಕ್ಕೆ ಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಅಂದರೆ 1998-99ರಲ್ಲಿ ಪೆಬ್ರವರಿ 99ರ ಅಂತ್ಯದವರೆಗೆ ಕೆ.ಪಿ.ಸಿ.ಯಿಂದ ಕೆ.ಇ.ಬಿ.ಗೆ ಸರಬರಾಜಾದ ನಿವ್ವಳ ವಿದ್ಯುಚ್ಛಕ್ತಿಯ ಪ್ರಮಾಣ 13,669ದಶಲಕ್ಷ ಯೂನಿಟ್ಟುಗಳು.

ಆ) ಕಳೆದ ಸಾಲಿನ 1997-98ಕ್ಕೆ ಈ ಲೆಕ್ಕಾಚಾರವನ್ನು ಮಾಡಲಾಗಿದ್ದು, ವಿದ್ಯುತ್ ಪ್ರಸರಣೆ ಮತ್ತು ವಿತರಣೆಯಲ್ಲಿ ಆಗಿರುವ ನಷ್ಟವನ್ನು ಶೇಕಡಾ 18.56ಎಂದು ಲೆಕ್ಕಾಚಾರ ಮಾಡಲಾಗಿದೆ.

ಇ) ಕೆ.ವಿ. ಮಂಡಳಿಯಲ್ಲಿ ವಿದ್ಯುತ್ ಸೋರಿಕೆಯನ್ನು ಕಡಿಮೆ ಮಾಡಲು ಈ ಕೆಳಕಂಡ ವ್ಯವಸ್ಥೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.